

ಅಲಹಾಬಾದ್‌ನಲ್ಲಿ ನಡೆಯುತ್ತಿರುವ ಕುಂಭಮೇಳ ಹಲವು ಕಾರಣಗಳಿಂದ ಮುಖ್ಯವಾದುದು. ಶ್ರದ್ಧೆ–ಭಕ್ತಿಯ ಪರಾಕಾಷ್ಠೆಯ ಅನಾವರಣದ ಜೊತೆಗೆ, ಭಾರತೀಯ ಸಂಸ್ಕೃತಿಯ ಹಲವು ಆಯಾಮಗಳು ಮೇಳದ ನೆಪದಲ್ಲಿ ಗಂಗೆಯ ತಟದಲ್ಲಿ ರೂಪುಗೊಳ್ಳುತ್ತವೆ. ವ್ಯವಸ್ಥೆಯ ಬಗ್ಗೆ ಪ್ರತಿನಿತ್ಯ ಕೇಳುವ ಅವ್ಯವಸ್ಥೆಯಿಂದ ಮುಕ್ತವಾಗಿರುವುದು ಕೂಡ ಕುಂಭಮೇಳದ ವಿಶೇಷ.